ವರ್ಷ	ಮರಗಳ ಸಂಖ್ಯೆ	ಆದಾಯ (ರೂ.ಗಳಲ್ಲಿ)
1999-2000	5720	7,34,167-00
2000-2001	9825	16,07,686-00
2001-2002	ಇಲ್ಲ	ಇಲ್ಲ

ಇ) ಕೊರಟಗೆರೆ ತಾಲ್ಲೂಕಿನಲ್ಲಿ ರೈತಾಪಿ ವರ್ಗದವರು ಒತ್ತುವರಿ ಮಾಡಿಕೊಂಡಿರುವ ಅರಣ್ಯ ವಿಸ್ತೀರ್ಣ ಒಟ್ಟು 139 ಎಕರೆ 31 ಗುಂಟೆ (56.42) ಹೆಕ್ಟೇರ್)

ಗ್ರಾಮವಾರು ವಿವರ:-

ಗ್ರಾಮದ ಹೆಸರು	ರೈತರ ಸಂಖ್ಯೆ	ವಿಸ್ತೀರ್ಣ ಎಕರೆ ಗುಂಟೆ
ಗೊಂದಿಹಳ್ಳಿ	24	69-19
ವೆಂಕನಹಳ್ಳಿ	01	2-00
ಕುರಂಕೊಟೆ	01	2-00
ಹೊಸಕೋಟೆ	20	63-27
ಬೂದಗವಿ	06	2-25
ಒಟ್ಟು	52	139.31

ಈ) ಕೊರಟಗೆರೆ ತಾಲ್ಲೂಕಿನಲ್ಲಿ ಒತ್ತುವರಿ ಮಾಡಿಕೊಂಡಿರುವ 52 ರೈತಾಪಿ ವರ್ಗದವರ ಪೈಕಿ 25 ರೈತರಿಗೆ ಪ್ರಥಮ ಮಾಹಿತಿ ವರದಿ (FIR) ಮಾಡಿ ಅವರಿಗೆ ನೋಟಿಸ್ ಜಾರಿ ಮಾಡಲಾಗಿರುತ್ತದೆ. ಉಳಿದ (27 ಸಂಖ್ಯೆ) ಒತ್ತುವರಿ ಮಾಡಿರುವ ರೈತರಿಗೆ ಒತ್ತುವರಿ ತೆರವುಗೊಳಿಸಲು ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಈಗಾಗಲೇ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಂಡಿರುವುದರಿಂದ ಸರ್ಕಾರವು ತಳೆದಿರುವ ನಿಲುವಿನ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಕಾರ್ಯನಿರ್ವಹಣೆ

623 (642) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ): ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕಛೇರಿಗಳ ಸಂಖ್ಯೆ ಎಷ್ಟು

ಆ) ಈ ಉದ್ಯೋಗ ವಿನಿಮಯ ಕಛೇರಿಯಿಂದ ನಿರುದ್ಯೋಗಿಗಳಿಗೆ ಕಳೆದ ಮೂರು ವರ್ಷಗಳಿಂದ ಎಷ್ಟು ಮಂದಿಗೆ ಉದ್ಯೋಗಾವಕಾಶವನ್ನು ದೊರಕಿಸಿಕೊಡಲಾಗಿದೆ. (ವಿವರ ಒದಗಿಸುವುದು)

ಇ) ಕಳೆದ ಮೂರು ವರ್ಷಗಳಿಂದ ಉದ್ಯೋಗಕ್ಕಾಗಿ ನೊಂದಾಯಿಸಿದ ಅಭ್ಯರ್ಥಿಗಳ ಸಂಖ್ಯೆ ಎಷ್ಟು;

ಈ) ಈ ಉದ್ಯೋಗ ವಿನಿಮಯ ಕಛೇರಿಯಿಂದ ಅರ್ಹ ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿಸಿಕೊಡಲಾಗದೇ ನಿರುದ್ಯೋಗಿಗಳಿಗೆ ಈ ಇಲಾಖೆಯಲ್ಲಿ ಯಾವುದೇ ಉದ್ಯೋಗದ

ಕರೆಯು ಬರುತ್ತಿಲ್ಲ ಆದ್ದರಿಂದ ಅಭ್ಯರ್ಥಿಗಳು ಹೆಸರನ್ನು ನೊಂದಾಯಿಸುವುದು ಅಪ್ರಯೋಜಕ ಎಂದು ಅಭ್ಯರ್ಥಿಗಳಿಗೆ ತಪ್ಪು ಭಾವನೆಯನ್ನು ಅಧಿಕಾರಿಗಳು ಕಲ್ಪಿಸಿಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದರೆ, ಇಂತಹ ಅಧಿಕಾರಿಗಳ ವಿರುದ್ಧ ಸರ್ಕಾರವು ಕ್ರಮ ಕೈಗೊಂಡು ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿಸಿಕೊಡುವಲ್ಲಿ ಯಾವ ಮಾರ್ಗೋಪಾಯವನ್ನು ಅನುಸರಿಸಿ ಅನುಕೂಲ ಮಾಡಿಕೊಡುವುದು?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು) :

ಅ) 34

ಆ) ಒಟ್ಟು 15,977 ಅಭ್ಯರ್ಥಿಗಳು ಉದ್ಯೋಗ ಪಡೆದಿರುತ್ತಾರೆ. ವಿವರ ಈ ಕೆಳಕಂಡಂತಿದೆ.

ವರ್ಷ	ಉದ್ಯೋಗ ಪಡೆದವರ ಸಂಖ್ಯೆ
2000	8,693
2001	4,172
2002	3,112

ಇ) ಒಟ್ಟು 59,08,810 ಅಭ್ಯರ್ಥಿಗಳು. ವಿವರ ಈ ಕೆಳಕಂಡಂತಿದೆ.

ವರ್ಷ	ದಾಖಲೆ
2000	19,50,065
2001	20,23,922
2002	19,34,823

ಈ) ಇಲ್ಲ

ಉ) ಉದ್ಭವಿಸುವುದಿಲ್ಲ.

ಕೊರಟಗೆರೆ ತಾಲ್ಲೂಕಿನ ಗ್ರಾಮೀಣ ಕ್ರೀಡಾಪಟುಗಳಿಗೆ ಸಲಕರಣೆಗಳ ಪೂರೈಕೆ

624 (643) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ): ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊರಟಗೆರೆ ತಾಲ್ಲೂಕಿನಲ್ಲಿ ಕ್ರೀಡಾಪಟುಗಳ ಅನುಕೂಲಕ್ಕಾಗಿ ಕ್ರೀಡಾಂಗಣ ನಿರ್ಮಿಸುವ ಯೋಜನೆಯು ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದರೆ, ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು? ಯಾವ ಯಾವ ಯೋಜನೆಯಿಂದ ಅನುದಾನ ಮಂಜೂರು ಮಾಡಲಾಗುವುದು?

ಇ) ಗ್ರಾಮೀಣ ಭಾಗದಲ್ಲಿ ಕ್ರೀಡಾ ಸಲಕರಣೆಗಳನ್ನು ಸರ್ಕಾರದಿಂದ ಸಕಾಲದಲ್ಲಿ ವಿತರಿಸುತ್ತಿರುವುದು ನಿಜವೇ? ಸಕಾಲದಲ್ಲಿ ಗ್ರಾಮೀಣ ಬಾಗದ ಕ್ರೀಡಾಪಟುಗಳಿಗೆ ಸಲಕರಣೆಗಳು ವಿತರಿಸದೇ ವಿಳಂಬ ನೀತಿ ಅನುಸರಿಸುತ್ತಿರುವ ಅಧಿಕಾರಿಯ ವಿರುದ್ಧ ಕೈಗೊಳ್ಳುವ ಕ್ರಮವೇನು?

ಈ) ಗ್ರಾಮೀಣ ಭಾಗದ ಕ್ರೀಡಾಪಟುಗಳಿಗೆ ಉತ್ತಮ ರೀತಿಯಲ್ಲಿ ಸಲಕರಣೆಗಳನ್ನು ವಿತರಿಸಿ ಅನುಕೂಲ ಮಾಡಿಕೊಡಬಹುದೇ?